ಅಡಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ

ಸಂಶೋಧನೆಗಳು ಪ್ರಗತಿಯಲ್ಲಿ | ಆರಗ ಜ್ಞಾನೇಂದ್ರ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಲಕ್ಷಾಂತರ ಜನ ರೈತರ ಬದುಕಿಗೆ ಬೆನ್ನೆಲುಬಾಗಿರುವ ಅಡಕೆ ಬಳಕೆಯಿಂದ ಆರೋಗ್ಯಕ್ಕೆ ಹಾನಿಕರವಿಲ್ಲ, ಬದಲಿಗೆ ಅನೇಕ ಬಗೆಯಲ್ಲಿ ಲಾಭಕರವಿದೆ ಎಂಬ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿಗೆ ಲೋಕಸಭಾ ಸದಸ್ಯರೊಬ್ಬರು ಅಡಕೆ ಹಾನಿಕಾರಕ ಹಾಗೂ ಅದನ್ನು ಬ್ಯಾನ್ ಮಾಡಬೇಕೆಂದು ನೀಡಿದ್ದ ಹೇಳಿಕೆಯಿಂದ ರೈತರು ಆತಂಕಕ್ಕೆ ಒಳಗಾಗಿದ್ದರು. ಈ ಕಾರಣದಿಂದಾಗಿ, ಅಡಕೆ ದೇಹಕ್ಕೆ ಹಾನಿಕಾರಕ ಅಲ್ಲ ಹಾಗೂ ಈ ರೀತಿ ಹೇಳಿಕೆಯಿಂದಾಗಿ ಅಡಕೆ ಮಾರುಕಟ್ಟೆ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲು ರಾಜ್ಯದ ಅಡಕೆ ಟಾಸ್ಕ್ ಫೋರ್ಸ್ ನಿಯೋಗದ ದೆಹಲಿಗೆ ತೆರಳಿ ಸಚಿವರನ್ನು ಭೇಟಿ ಮಾಡಲಾಗಿತ್ತು ಎಂದರು.



ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ಥೋಮರ್ ಹಾಗೂ ರಾಜ್ಯ ಸಚಿವರನ್ನ ಭೇಟಿ ಮಾಡಲಾಗಿದ್ದು, ಅಡಕೆ ಬಗ್ಗೆ ಕೋರ್ಟ್‌ನಲ್ಲಿ ತೀರ್ಮಾನ ಆಗದೆ ಯಾವುದೇ ಹೇಳಿಕೆಗಳನ್ನ ನೀಡಬಾರದು. ಅದು ಅಡಿಕೆ ಬೆಳೆಗಾರರ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು



ಮನವರಿಕೆ ಮಾಡಿದ್ದೇವೆ ಎಂದ ಆರಗ, ಅಡಕೆ ಮನುಷ್ಯನ ದೇಹಕ್ಕೆ ಹಾನಿಕರಕ ಎಂದು ಹಿಂದಿನ ಕಾಂಗ್ರೆಸ್ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಒಂದು ಅಫಿಡವಿಟ್ ನೀಡಿದ್ದು, ಈ ಅಫಿಡವಿಟ್ ತೆಗೆಯುವ ಪ್ರಯತ್ನ ಮಾಡುತ್ತಿದ್ದೇವೆ ಹಾಗೂ ಅಡಕೆ ಹಾನಿಕರಕ ಅಲ್ಲ ಎಂಬ ಬಗ್ಗೆ ನಮ್ಮ ರಾಜ್ಯದಲ್ಲಿ ಸಂಶೋಧನೆಯನ್ನ ಸಹ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ನಮ್ಮ ಟಾಸ್ಕ್‌ಫೋರ್ಸ್ ಕಡೆಯಿಂದ ಸಂಶೋಧನೆ ನಡೆಯುತ್ತಲಿದೆ ಹಾಗೂ ಕೇಂದ್ರದಿಂದಲೂ ಅಧ್ಯಯನ ನಡೆಸಲು ಒಂದು ಸಮಿತಿ ರಚನೆ ಮಾಡಲಾಗುತ್ತಿದೆ. ಅಡಕೆ ಸೇವನೆ, ಆರೋಗ್ಯಕ್ಕೆ ಹಾನಿಕಾರಕ ಅಲ್ಲ ಎಂಬ ಬಗ್ಗೆ ಒಂದು ಸ್ಪಷ್ಟ ನಿರ್ಧಾರಕ್ಕೆ ಬರುವ ನಿರೀಕ್ಷೆಯಿದೆ ಹಾಗೂ ರೈತ ಸಮುದಾಯಕ್ಕೆ ಇದರಿಂದ ಬಹಳ ದೊಡ್ಡ ಯಶಸ್ಸು ದೊರೆಯಲಿದೆ ಎಂದರು.

ನಾವು ನೀಡಿರುವ ಮನವಿಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ನಮಗೆ ಅತ್ಯಂತ ಸಂತೋಷವಾಗಿದೆ ಎಂದು ಆರಗ ಜ್ಞಾನೇಂದ್ರ ಹೇಳಿದರು.

22-03-2022 Vv Pg 07

22-03-2022 Vv Pg 08

ನೀರಿಂಗಿಸಲು ಸರಳ ವಿಧಾನ

ತೆರೆದ ಬಾವಿ ಹಾಗೂ ಕೊಳವೆ ಬಾವಿಗೆ ಮಳೆ ನೀರನ್ನು ಇಂಗಿಸುವ ಕಾರ್ಯಕ್ಕೆ ಯುವ ಸಮುದಾಯವನ್ನು ಪ್ರೇರೇಪಿಸುತ್ತಿರುವ ಉಡುಪಿ ಜಿಲ್ಲೆಯ ಕಲ್ಯಾಣಪುರ ನಿವಾಸಿ ಜೋಸೆಫ್ ಜಿ.ಎಂ. ರೆಬೆಲ್ಲೊ ಸರಳ ವಿಧಾನದಲ್ಲಿ ಜಲಸಂರಕ್ಷಣೆಯ ಜಾಗೃತಿ ಮೂಡಿಸುತ್ತಿದ್ದಾರೆ. ಮಳೆ ನೀರಿನೊಂದಿಗೆ ಅನುಸಂಧಾನ ಜಲಶಕ್ತಿ, ಜಲಾಮೃತ, ಜಲೋತ್ಸವ, ಆಟಲ್ ಭೂಜಲ ಹಾಗೂ ಘನ, ದ್ರವ ಮತ್ತು ಪ್ಲಾಸ್ಟಿಕ್ ಸಂಪನ್ಮೂಲ ನಿರ್ವಹಣೆ ಎಂಬ ವಿಚಾರಗಳ ಮೇಲೆ ವಾರ್ಷಿಕ ನೂರಕ್ಕೂ ಅಧಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಸಾಕ್ಷ್ಯಚಿತ್ರಗಳ ಮೂಲಕ ಮಾಹಿತಿ ಕಾರ್ಯಾಗಾರಗಳನ್ನು ನಡೆಸುತ್ತಿದ್ದಾರೆ. ಆಸಕ್ತರು ಕರೆದಲ್ಲಿಗೆ ತೆರಳಿ ನೀರಿಂಗಿಸುವ ಘಟಕಗಳನ್ನು ನಿರ್ಮಿಸಿಕೊಡುತ್ತಾರೆ. ನಿರ್ಜೀವ ಕೊಳವೆ ಬಾವಿಗೆ ಮರುಪೂರಣ ಮಾಡುವ ಮಾದರಿ ಘಟಕಗಳನ್ನು ನಿರ್ಮಿಸಿ ಯಶಸ್ಸು ಕಂಡಿದ್ದಾರೆ. ಜಲಸಂರಕ್ಷಣೆಗೆ ರಾಜ್ಯ ಸಂಪನ್ಮೂಲ ವ್ಯಕ್ತಿ ಮತ್ತು ತರಬೇತುದಾರರಾಗಿ ಸರ್ಕಾರದ ಅನೇಕ ಯೋಜನೆಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.



ಚಿತ್ರದುರ್ಗ ಜಲಾನಯನ ಇಲಾಖೆ ಕಂದಕ ಬದುಗಳ ನಿರ್ಮಾಣದ ಮೂಲಕ ಮಳೆ ನೀರಿನ ಸಂರಕ್ಷಣೆ ಮಾಡಿ ಅಂತರ್ಜಲ ಹೆಚ್ಚಿಸಿ ಸಾವಿರಾರು ಎಕರೆ ಕೃಷಿಭೂಮಿಗೆ ಜೀವ ತುಂಬಿದೆ. 2009ರಿಂದ ಹೊಸದುರ್ಗ ತಾಲೂಕಿನ ಮತ್ತೋಡು ಹಾಗೂ ಶ್ರೀರಾಂಪುರ ಹೋಬಳಿಗಳಲ್ಲಿ ಯೋಜನೆ ಅನುಷ್ಠಾನಗೊಳಿಸಿದ್ದು, ಮಳೆ ನೀರು ಜಮೀನಿನಲ್ಲೇ ನಿಲ್ಲುವಂತೆ ಗುಂಡಿಗಳನ್ನು ವಿನ್ಯಾಸಗೊಳಿಸಲಾಗಿದೆ. ಗುಂಡಿಗಳ ಮಣ್ಣಿನಲ್ಲಿಯೇ ಬದುಗಳನ್ನು ನಿರ್ಮಿಸಲಾಗಿದೆ. 5 ಮೀಟರ್ ಉದ್ದ, 1 ಮೀಟರ್ ಅಗಲ ಹಾಗೂ 0.6 ಮೀಟರ್ ಆಳವಿರುವಂತೆ ನಿರ್ಮಿಸಲಾಗಿರುವ ಪ್ರತಿ ಗುಂಡಿ ಮೂರು ಸಾವಿರ ಲೀಟರ್ ನೀರು ಹಿಡಿದಿಡುವ ಸಾಮರ್ಥ್ಯ ಹೊಂದಿದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ಇಂತಹ ನೂರು ಕಂದಕ ಹಾಗೂ ಬದುಗಳನ್ನು ನಿರ್ಮಿಸಬಹುದು. ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ ಆಂದಾಜು ಮೂರು ಲಕ್ಷ ಲೀಟರ್ ನೀರು ಸಂಗ್ರಹಿಸಿ ಭೂಮಿಗೆ ಇಂಗಿಸಬಹುದು ಎನ್ನುತ್ತಾರೆ ತಜ್ಞರು. ಮಣ್ಣಿನ ಸವಕಳಿ ತಡೆಯಲು ಕೂಡ ಇದು ಪೂರಕವಾಗಿದೆ. ಒಂದು ಇಂಚು ಮಣ್ಣು ರಚನೆಯಾಗಲು 600 ವರ್ಷಗಳಷ್ಟು ಸಮಯ ಹಿಡಿಯುತ್ತದೆ. ಆದರೆ, ಒಂದೇ ಮಳೆಗೆ ಅಷ್ಟು ಮಣ್ಣು ಕೊಚ್ಚಿ ಹೋಗುತ್ತದೆ. ಇದರಿಂದ ಈ ಯೋಜನೆ ಹೆಚ್ಚು ಪರಿಣಾಮಕಾರಿಯಾಗಿದೆ ಎನ್ನುತ್ತಾರೆ ಕೃಷಿ ತಜ್ಞರು. ಸದ್ಯ ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾಗಿರುವ ಸಿ.ಎಸ್.ಈಶ ಅವರು ಜಲಾನಯನ ಇಲಾಖೆಯಲ್ಲಿದ್ದಾಗ ಈ ಕಾರ್ಯಕ್ಕೆ ಮುತುವರ್ಜಿ ವಹಿಸಿದ್ದರು.

ಜೀವಸೆಲೆಗೆ ಕಂದಕ ಬಲ



ಜಲಾನಯನ ಇಲಾಖೆಯ ಮೂಲಕ ಮಳೆ ನೀರು ಇಂಗಿಸುವ ಹಾಗೂ ಶೇಖರಿಸಿ ಕೃಷಿ ಕಾರ್ಯಕ್ಕೆ ಒದಗಿಸುವ ಕಾಮಗಾರಿ ಕೈಗೊಳ್ಳಲಾಗಿದೆ. ಜಮೀನಿನಲ್ಲಿ ನಿರ್ಮಿಸಿದ ಗುಂಡಿ, ಬದುಗಳಿಂದ ಮರುಪೂರಣಕ್ಕೆ ಅನುಕೂಲವಾಗಿದೆ. | ಸಿ.ಎಸ್.ಈಶ ಹೊಸದುರ್ಗ ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ

ಸಚಿವ ಉಮೇಶ್ ಕತ್ತಿ ಪ್ರಕಟ | ರೈತರಿಗೆ ಮುಕ್ತ ಮಾರುಕಟ್ಟೆ ಅವಕಾಶ

ಶ್ರೀಗಂಧದ ಬೆಳೆಗೆ ನೂತನ ನೀತಿ ಜಾರಿ

ಶ್ರೀಗಂಧ ಬೆಳೆಯುವುದಕ್ಕೆ ಉತ್ತೇಜನ ಸೇರಿ ಹಲವು ಕ್ರಮಗಳನ್ನು ಕೈಗೊಳ್ಳಲಿಂದು ಶೀಘ್ರವೇ ಹೊಸ ನೀತಿ ಜಾರಿಗೆ ತರಲಾಗುವುದು ಎಂದು ಅರಣ್ಯ ಸಚಿವ ಉಮೇಶ್ ಕತ್ತಿ ಸೋಮವಾರ ಪ್ರಕಟಿಸಿದರು.



ವಿಧಾನ ಪರಿಷತ್‌ನ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್‌ನ ಎಸ್. ರವಿ ಪ್ರಶ್ನೆಗೆ ಉತ್ತರಿಸಿ, ಚಾಲ್ತಿ ನಿಯಮ, ಆದೇಶದ ಪ್ರಕಾರ ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಕೋಠಿಗಳು, ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೆ ಮಾತ್ರ ಶ್ರೀಗಂಧದ ಮರಗಳನ್ನು ಮಾರಾಟ ಅವಕಾಶವಿದೆ. ಈಗಿರುವ ನಿಯಮದಂತೆ ಕಳೆದ ಐದು ವರ್ಷಗಳ ಚಿಲ್ಲರೆ ಮಾರಾಟ ದರದ ಸರಾಸರಿ ಆಧಾರದಲ್ಲಿ ಅರಣ್ಯ ಇಲಾಖೆ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮವು ಬೆಲೆ ನಿಗದಿಪಡಿಸುತ್ತದೆ ಎಂದರು.

ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕ ಮತ್ತು ನೆಡುತೋಪು ನಿರ್ಮಾಣದ ಮೂಲಕ ಒಟ್ಟಾರೆ 4,699 ಹೆಕ್ಟೇರ್ ಪ್ರದೇಶದಲ್ಲಿ ಶ್ರೀಗಂಧ ಬೆಳೆಯಲಾಗುತ್ತಿದೆ. ರೈತರು ಹಾಗೂ ಸಾರ್ವಜನಿಕರ ಬೇಡಿಕೆಯಂತೆ ಸಸಿಗಳನ್ನು ರಿಯಾಯಿತಿ ದರದಲ್ಲಿ ಸರ್ಕಾರ ವಿತರಿಸುತ್ತಿದೆ. ಅರಣ್ಯ ಕೃಷಿ ಯೋಜನೆಯಡಿ ನೋಂದಣಿ ಮಾಡಿಕೊಂಡ ಅರ್ಹ ಫಲಾನುಭವಿಗಳಿಗೆ ಅವರ ಜಮೀನಿನಲ್ಲಿ ನೆಟ್ಟು ಬದುಕುಳಿದ ಸಸಿಗಳಿಗೆ 1ನೇ ವರ್ಷಾಂತ್ಯ 35 ರೂ., ಎರಡನೇ ವರ್ಷಕ್ಕೆ 40 ರೂ., ಮೂರನೇ ವರ್ಷಾಂತ್ಯಕ್ಕೆ 50 ರೂ.ನಂತೆ ಒಟ್ಟು 125 ರೂ. ಪ್ರೋತ್ಸಾಹಧನ ನೀಡಲಾಗುತ್ತದೆ ಎಂದು ವಿವರಿಸಿದರು.

ಈ ಉತ್ತರಕ್ಕೆ ತೃಪ್ತರಾಗದ ಎಸ್.ರವಿ, ರಾಜ್ಯದಲ್ಲಿ 25,000ಕ್ಕೂ ಹೆಚ್ಚು ರೈತರು ಶ್ರೀಗಂಧ ಬೆಳೆಯುತ್ತಿದ್ದು, 30,000 ಹೆಕ್ಟೇರ್ ಪ್ರದೇಶದಲ್ಲಿದೆ. ಶ್ರೀಗಂಧಕ್ಕೆ ಬೆಲೆ ನಿಗದಿಯಲ್ಲಿ ರೈತರಿಗೆ ಮೋಸವಾಗುತ್ತಿದ್ದು, ಈ ಬಗ್ಗೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ನೀಡಲು ಕೋರಿದರು. ಪತ್ರ ಕೊಡಿ ಪರಿಗಣಿಸುವೆ ಎಂದು ಸಭಾಪತಿ ತಿಳಿಸಿದರು.

ಕಪ್ಪತ್ತಗುಡ್ಡಕ್ಕೆ ಬೆಂಕಿ ಗಂಭೀರ ಪರಿಗಣನೆ

ಅಮೂಲ್ಯ ಔಷಧೀಯ ಸಸ್ಯಗಳನ್ನು ಹೊಂದಿರುವ ಕಪ್ಪತಗುಡ್ಡದಲ್ಲಿ ಪದೇಪದೆ ಬೆಂಕಿ ಅನಾಹುತ ಸಂಭವಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ. ಶೀಘ್ರವೇ ಸ್ಥಳ ತಪಾಸಣೆ ಜತೆಗೆ ಶಾಸಕರು ಮತ್ತು ಅಧಿಕಾರಿಗಳ ಜಂಟಿ ಸಭೆ ನಡೆಸುವೆ ಎಂದು ಉಮೇಶ್ ಕತ್ತಿ ಭರವಸೆ ನೀಡಿದರು. ಬಿಜೆಪಿಯ ಎಸ್.ವಿ.ಸಂಕನೂರು ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಪ್ಪತಗುಡ್ಡದಲ್ಲಿ ಹುಲ್ಲು, ಇತರ ನೆಲ ಸಸ್ಯಗಳು ಹೇರಳವಾಗಿ ಲಭ್ಯವಿರುವ ಕಾರಣ ಸುತ್ತಮುತ್ತಲಿನ ಹಳ್ಳಿಗರು ಮೇಕೆ, ಕುರಿಗಳನ್ನು ಮೇಯಿಸಲು ಕೊಂಡೊಯ್ಯುತ್ತಾರೆ. ಹೀಗೆ ಹೋದಾಗ ಬೀಡಿ ಸೇದಿ ಒಗೆದಿರುವುದು ಬೆಂಕಿ ಆಕಸ್ಮಿಕ ಕಾರಣವೆಂದು ಸಮಜಾಯಿಷಿ ನೀಡಿದರು. ಈ ಉತ್ತರಕ್ಕೆ ಸಂಕನೂರು ಅಕ್ಷೇಪವೆತ್ತಿ, ಅಮೂಲ್ಯ ಔಷಧೀಯ ಸಸ್ಯಗಳು ಬೆಂಕಿಗೆ ಆಹುತಿಯಾಗುವ ಬಗ್ಗೆ ಅಧ್ಯಯನ ನಡೆಸಿಲ್ಲವೆಂದರೆ ಹೇಗೆ? ಎಂದರು. ಇದಕ್ಕೆ ಸಭಾಪತಿ ದನಿಗೂಡಿಸಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲು ಸಲಹೆ ನೀಡಿದರು.

ಕಾಫಿ ಬೆಳೆಗೆ ವಿದ್ಯುತ್ ಶುಲ್ಕ ವಿನಾಯಿತಿ ಬಗ್ಗೆ ಪರಿಶೀಲನೆ

ವಿಧಾನಸಭೆ: ಕಾಫಿ ಬೆಳೆಗಾರರ 10 ಎಚ್.ಪಿ. ವರೆಗಿನ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಶುಲ್ಕ ಪಾವತಿಗೆ ವಿನಾಯಿತಿ ನೀಡುವ ವಿಷಯ ಸರಕಾರದ ಪರಿಶೀಲನೆಯ ಹಂತದಲ್ಲಿದ್ದು, ಅಂತಿಮ ನಿರ್ಣಯ ಕೈಗೊಳ್ಳಬೇಕಾಗಿದೆ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅವರ ಪ್ರಶ್ನೆ ಉತ್ತರಿಸಿದ ಅವರು, ರಾಜ್ಯದ ವಿದ್ಯುತ್ ಸರಬರಾಜು ಕಂಪೆನಿಗಳ ವ್ಯಾಪ್ತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಜಕಾತಿ ಆದೇಶಾನುಸಾರ ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ ಮತ್ತು ರಬ್ಬರ್ ಪ್ಲಾಂಟೇಷನ್‌ಗಳನ್ನು ಹೊರತುಪಡಿಸಿ ಉಳಿದ ಬೆಳೆಗಳಿಗೆ ಮಂಜೂರಾದ ವಿದ್ಯುತ್ ಹೊರೆಯು 10 ಎಚ್.ಪಿ. ಮತ್ತು ಅದಕ್ಕಿಂತ ಕಡಿಮೆ ಸಾಮರ್ಥ್ಯದ ಹೊರೆ ಇರುವ ರೈತರ ಪಂಪ್ ಸೆಟ್‌ಗಳಿಗೆ ಮಾತ್ರ ಉಚಿತ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಕಾಫಿ ಬೆಳೆಗಾರರ ಹಿತದೃಷ್ಟಿಯಿಂದ ಆರ್ಥಿಕ ಹೊರೆಯಾಗದಂತೆ ಕಡಿಮೆ ದರದಲ್ಲಿ ಅಂದರೆ, 10 ಎಚ್.ಪಿ. ಮತ್ತು ಅದಕ್ಕಿಂತ ಕಡಿಮೆ ಸಾಮರ್ಥ್ಯದ ಹೊರೆಯನ್ನು ಹೊಂದಿರುವ ಕಾಫಿ ಬೆಳೆಗಾರರ ಪ್ರತಿ ಎಚ್.ಪಿ. ಗೆ ಮಾಸಿಕ ನಿಗದಿತ ಶುಲ್ಕ



ರೂ.80 ಹಾಗೂ ಪ್ರತಿ ಯೂನಿಟ್ ಬಳಕೆಗೆ ರೂ.3.85 ಶುಲ್ಕವನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ನಿಗದಿಪಡಿಸಿದ್ದು, ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ವಿದ್ಯುತ್ ಶುಲ್ಕ ಪಾವತಿಗೆ ವಿನಾಯಿತಿ ನೀಡುವ ವಿಷಯ ಸರಕಾರದ ಪರಿಶೀಲನೆಯ ಹಂತದಲ್ಲಿದೆ. ಅಂತಿಮ ನಿರ್ಣಯ ಇನ್ನಷ್ಟೇ ಕೈಗೊಳ್ಳಬೇಕಾಗಿರುತ್ತದೆ ಎಂದು ಸಚಿವರು ವಿವರಿಸಿದರು. ಇದಕ್ಕೂ ಮುನ್ನ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ರಾಜ್ಯದಲ್ಲಿ ಯಾವ ಯಾವ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ ಎಂದು ಪ್ರಶ್ನಿಸಿದರಲ್ಲದೆ, ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಪ್ರಾಕೃತಿಕ ವಿಕೋಪದಿಂದಾಗಿ ರೈತರು ಭೂಮಿ ನಷ್ಟ, ಬೆಳೆ ನಷ್ಟ ಹೊಂದಿದ್ದಲ್ಲದೆ, ಕಾಫಿ ಬೆಳೆಯುವ ರೈತರು ವರ್ಷದಲ್ಲಿ ಕೇವಲ ಒಂದು ತಿಂಗಳು ಮಾತ್ರ ಗಿಡಗಳಿಗೆ ನೀರು ಹಾಯಿಸುತ್ತಿರುವುದರಿಂದ ಇವರಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲು ಸರಕಾರ ಕ್ರಮಕೈಗೊಳ್ಳಬೇಕು ಎಂದು ಗಮನ ಸೆಳೆದರು.

ಸ್ವತಃ ಸಿಎಂ ಬಸವರಾಜ ಬೊಮ್ಮಾಯಿ ಅವರೇ ಉಚಿತ ವಿದ್ಯುತ್ ಭರವಸೆ ನೀಡಿದ್ದರೂ, ಸೆಸ್ಕ್ ಮಾತ್ರ ವಿದ್ಯುತ್ ನೀಡುತ್ತಿಲ್ಲ ಎಂದು ನಿಗಮದ ವಿರುದ್ಧ ಕಾಫಿ ಬೆಳೆಗಾರರು ಕಿಡಿಕಾರಿದರು. ಸೆಸ್ಕ್ ಎಕ್ಸ್‌ಕ್ಯೂಟಿವ್ ಎಂಜಿನಿಯರ್ ಅಶೋಕ್‌ಗೆ ಮುತ್ತಿಗೆ ಹಾಕಿರುವ ರೈತರು, ಕಚೇರಿ ಒಳ ಪ್ರವೇಶಿಸಲು ನಿರ್ಬಂಧ ವ್ಯಕ್ತಪಡಿಸಿದರು. ಅಲ್ಲದೆ ಮೈಸೂರಿನಿಂದ ಅಧೀಕ್ಷಕ ಇಂಜಿನಿಯರ್ ಮಡಿಕೇರಿಗೆ ಬರಬೇಕೆಂದು ಪಟ್ಟುಹಿಡಿದ ಬೆಳೆಗಾರರು ಪ್ರತಿಭಟನೆ ಮುಂದುವರಿಸಿದರು.

ಸೆಸ್ಕ್ ಕಚೇರಿಗೆ ಮುತ್ತಿಗೆ

ಈ ನಡುವೆ 10 ಎಚ್.ಪಿ. ವರೆಗಿನ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡದ ಕ್ರಮವನ್ನು ವಿರೋಧಿಸಿ ಕಾಫಿ ಬೆಳೆಗಾರರು ಸೋಮವಾರ ಮಡಿಕೇರಿಯ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಬೇರೆ ಜಿಲ್ಲೆಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದ್ದು, ಕೊಡಗು ಜಿಲ್ಲೆಗೆ ಮಾತ್ರ ತಾರತಮ್ಯ ಮಾಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ತೋಟಗಾರಿಕೆ ತಂತ್ರಜ್ಞಾನಗಳ ಸಾಕ್ಷ್ಯಚಿತ್ರ ಬಿಡುಗಡೆ



ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ 15 ಸಾಕ್ಷ್ಯಚಿತ್ರಗಳನ್ನು ಬಿಡುಗಡೆ ಮಾಡಲಾಯಿತು.

■ **ವಿಕ ಸುದ್ದಿಲೋಕ** ಬೆಂಗಳೂರು

ತೋಟದ ಬೆಳೆಗಳ ಅಭಿವೃದ್ಧಿಗೆ ಅನುಕೂಲವಾಗುವಂತೆ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ವಿಶೇಷವಾಗಿ ಸಿದ್ಧಪಡಿಸಿರುವ ತೋಟಗಾರಿಕೆ ತಂತ್ರಜ್ಞಾನಗಳ 15 ಸಾಕ್ಷ್ಯಚಿತ್ರಗಳನ್ನು ಹೆಸರಘಟ್ಟದಲ್ಲಿ ಸೋಮವಾರ ಬಿಡುಗಡೆ ಮಾಡಲಾಯಿತು.

ಬಳಿಕ ಎಲ್ಲ ಸಾಕ್ಷ್ಯ ಚಿತ್ರಗಳನ್ನು ಕರ್ನಾಟಕ ಸರಕಾರಕ್ಕೆ ಹಸ್ತಾಂತರಿಸಲಾಯಿತು. ಈ ವೇಳೆ ಐಐಎಚ್‌ಆರ್ ನಿರ್ದೇಶಕ ಡಾ.ಬಿ.ಎನ್.ಎಸ್. ಮೂರ್ತಿ ಮಾತನಾಡಿ, ''ತೋಟಗಾರಿಕೆ ತಂತ್ರಜ್ಞಾನಗಳು ತ್ವರಿತವಾಗಿ ರೈತರಿಗೆ ತಲುಪಲು ಇಂತಹ ವಿನೂತನ ಮಾರ್ಗಗಳು ಪ್ರಯೋಜನಕಾರಿ,'' ಎಂದರು. ರೈತರಿಗೆ ತೋಟಗಾರಿಕೆ ಬೆಳೆಗಳು, ತಂತ್ರಜ್ಞಾನ ಬಳಕೆ ಮಾಡುವ ಕುರಿತು ಈ ಸಾಕ್ಷ್ಯ ಚಿತ್ರಗಳು ನೆರವಾಗಲಿವೆ. ಹದಿನೈದು ತಂತ್ರಜ್ಞಾನಗಳ ಡಿವಿಡಿಗಳ 4,500 ಪ್ರತಿಗಳನ್ನು ರಾಜ್ಯ ಕೃಷಿ ಇಲಾಖೆಗೆ ಹಸ್ತಾಂತರಿಸಲಾಯಿತು. ಅಪರ ಕೃಷಿ ನಿರ್ದೇಶಕ ಎಂ. ಎಸ್.ದಿವಾಕರ್ ಸಂಸ್ಥೆಯ ಕಾರ್ಯಗಳನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನ ವಿಜ್ಞಾನಿಗಳಾದ ಡಾ. ಆರ್. ವೆಂಕಟಕುಮಾರ್, ಡಾ. ಕೆ.ವಿ. ರವಿಶಂಕರ್, ಕೃಷಿ ಉಪನಿರ್ದೇಶಕಿ ಮಂಜುಳಾ, ಕವಿತಾ, ಸಂಸ್ಥೆಯ ಎಲ್ಲಾ ವಿಜ್ಞಾನಿಗಳು, ರೈತರು ಭಾಗವಹಿಸಿದ್ದರು.

2 ವರ್ಷಗಳ ಪರಿಶ್ರಮ

ಎಲ್ಲ 15 ಸಾಕ್ಷ್ಯಚಿತ್ರಗಳನ್ನು ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿ ಡಾ. ಬಿ. ನಾರಾಯಣಸ್ವಾಮಿ ಅವರು ನಿರ್ಮಿಸಿದ್ದಾರೆ. ಎರಡು ವರ್ಷಗಳ ಕಾಲ ದಾಖಲೆ, ಚಿತ್ರೀಕರಣ, ರೈತರು-ವಿಜ್ಞಾನಿಗಳ ಸಂದರ್ಶನ ಮುಂತಾದವುಗಳನ್ನು ರಚಿಸಿ ರೈತರಿಗೆ ಸರಳವಾಗಿ ಅರ್ಥವಾಗುವಂತೆ ನಿರ್ಮಿಸಲಾಗಿದೆ.

22-02-2022
Vk Pg 10

ಸಮಿತಿಯಿಂದ ಕೃಷಿ ಕಾಯ್ದೆಗೆ ಬೆಂಬಲ

ಹೊಸದಿಲ್ಲಿ: ವಿವಾದಾತ್ಮಕ ಮೂರು ಕೃಷಿ ಕಾನೂನುಗಳ ಅಧ್ಯಯನಕ್ಕೆ ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯು ಕೃಷಿ ಕಾಯ್ದೆ ಯನ್ನು ಬೆಂಬಲಿಸಿದೆ ಎಂದು ಸಮಿತಿಯ ವರದಿ ಬಹಿರಂಗಪಡಿಸಿದೆ. ಈ ಬಗ್ಗೆ ಸೋಮವಾರ ಸಮಿತಿಯ ವರದಿ ಯನ್ನು ಬಿಡುಗಡೆ ಮಾಡಿರುವ ರೈತಮುಖಂಡ ಹಾಗೂ ಸಮಿತಿ ಸದಸ್ಯ ಅನಿತ್ ಘನಾವತ್, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವ್ಯವಸ್ಥೆಯನ್ನು ಕಾನೂನು ಬದ್ಧಗೊಳಿಸಲು ರಾಜ್ಯಗಳಿಗೆ ಸ್ವಾತಂತ್ರ್ಯ ನೀಡುವುದು ಸೇರಿದಂತೆ ಕಾನೂನುಗಳಲ್ಲಿ ಹಲವು ಬದಲಾವಣೆಗಳನ್ನು ಸಮಿತಿ ಸೂಚಿಸಿದೆ. ಈಗಾಗಲೇ ಕೃಷಿ ಕಾಯ್ದೆಯನ್ನು ರದ್ದುಗೊಳಿಸಿರುವುದರಿಂದ ಈಗ ವರದಿಗೆ ಯಾವುದೇ ಪ್ರಸ್ತುತತೆ ಇಲ್ಲ. ಆದರೆ ಭವಿಷ್ಯದಲ್ಲಿ ಕೃಷಿ ಕ್ಷೇತ್ರಕ್ಕೆ ನೀತಿಗಳನ್ನು ರೂಪಿಸಲು ಇದು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.



22-02-2022
Vk Pg 10

Mango yield expected to be lower than half of usual

Climatic changes damage crop; mango season delayed

K.V. ADITYA BHARADWAJ
BENGALURU

There is bad news for mango lovers eagerly awaiting the arrival of the king of fruits; the mango season is delayed by nearly a month and owing to widespread crop damage, the yield is expected to be less than half of the usual.

This will be the fourth straight year of mango farmers suffering crop losses. As the yield falls, farmers are now pinning hopes that the prices will shoot up.

"The flowering in trees was delayed this year due to unseasonal rains in October and November. Flowering that should happen by the first week of December happened only in February. Good rains after a spell of three years of drought has meant good moisture content in the soil, leading to vegetative growth of the trees, affecting fruit formation," explained K. Srinivas Gowda, president, Chickballapur Mango Growers' Association, estimating that the yield this season would only be around 30% of a normal year.

There have been other issues plaguing the mango crop this year.

"The crop has been affected by both hoppers and borer pests this season. We have held several meetings and issued timely advisories. But the delay in flowering, vegetative growth and fruit fall combined with the pests are expected to halve the yield. Over the last three years, the crop has been hostage to climate change, unseasonal rains and soaring temperatures, and the cycle of the crop has been disturbed," said C.G. Nagaraju, MD of Karnataka State Mango Development and Marketing Corporation Ltd.

The Corporation estimates that the yield this year will be around 8 lakh metric tonnes, as against a normal yield in the range of 14-16 lakh metric tonnes.

Due to late floweringm the season will start late and end later than usual this year.

The first mangoes - usually from Ramanagara district - hit the markets in the second fortnight of March, which is expected this year only by the second fortnight of April.

The season usually ends by July, but this year the season is likely to have an extended run.

Mr. Gowda said because the supplies in the market will be low, they hope they get a good price, failing which farmers will run into heavy losses making their condition precarious.



Mango yield is down by 60% ahead of Ugadi in Bengaluru
▪ BHAGYA PRAKASH K.

22-02-2022
Dec Hrd Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

22-02-2022
Vk Pg 10

ಕಬ್ಬನ್ ಪಾರ್ಕ್‌ನಲ್ಲಿ ಮೀನುಗಾರಿಕಾ ಸಚಿವ ಎಸ್. ಅಂಗಾರ ಅವರಿಂದ ಚಾಲನೆ

ಮೀನು ತಲುಪಿಸಲು ವೆಬ್‌ಸೈಟ್

▪ ವಿಕ ಸುದ್ದಿಲೋಕ ಬೆಂಗಳೂರು

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಆನ್‌ಲೈನ್ ಮೂಲಕ ಮನೆಮನೆಗೆ ಮೀನು ಮತ್ತು ಮೀನಿನ ಖಾದ್ಯಗಳನ್ನು ತಲುಪಿಸುವ ವೆಬ್‌ಸೈಟ್ ಬಿಡುಗಡೆ ಮಾಡಿದೆ.

ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿಯಲ್ಲಿ ಬಂದರು, ಮೀನುಗಾರಿಕೆ ಮತ್ತು ಒಳನಾಡು ಸಚಿವ ಎಸ್. ಅಂಗಾರ ಸೋಮವಾರ ವೆಬ್‌ಸೈಟ್ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿದ ಸಚಿವರು ''ಗ್ರಾಮೀಣ ಭಾಗದಲ್ಲಿ ಮೀನು ಮಾರಾಟಕ್ಕೆ ಮೂರು ಮತ್ತು ನಾಲ್ಕು ಚಕ್ರದ ಎಲೆಕ್ಟ್ರಿಕ್ ವಾಹನ ನೀಡುವ ಯೋಜನೆಯನ್ನು ಶೀಘ್ರದಲ್ಲಿ ಜಾರಿ ಮಾಡಲಾಗುವುದು. ಈ ವಾಹನಗಳ ಮೇಲೆ ಸೌರ ವಿದ್ಯುತ್ ಫಲಕ ಜೋಡಿಸುವ ಮೂಲಕ, ಆ ವಾಹನದಲ್ಲಿಯೇ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಮಾಡಲಾಗುವುದು. ಇದು ದೀರ್ಘಕಾಲದವರೆಗೆ ಮೀನು ಹಾಳಾಗದಂತೆ ಕಾಪಾಡುತ್ತದೆ'' ಎಂದರು.

ಮೀನಿನೊಂದಿಗೆ ಮೀನಿನ ಖಾದ್ಯವೂ ಲಭ್ಯ

''ಮೀನಿನ ಬೇಡಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಆನ್‌ಲೈನ್ ಮಾರುಕಟ್ಟೆ ಹೆಚ್ಚು ಪ್ರಭಾವ ಬೀರಲಿದೆ. ಇದರಿಂದ ಜನರಿಗೆ ಸುಲಭದಲ್ಲಿ ಒಳ್ಳೆಯ ಗುಣಮಟ್ಟದ ಮೀನು ಸಿಗಲಿದೆ. ಇನ್ನೊಂದು ಕಡೆ ಉದ್ಯೋಗ ಸೃಷ್ಟಿಯೂ ಆಗುತ್ತದೆ'' ಎಂದು ಹೇಳಿದರು.

'' ಮೀನು ತಿನ್ನುವುದರಿಂದ ದೇಹದಲ್ಲಿ ಪೌಷ್ಟಿಕಾಂಶ ವೃದ್ಧಿಯಾಗುವುದರೊಂದಿಗೆ ರೋಗನಿರೋಧಕ ಶಕ್ತಿಯೂ ವರ್ಧಿಸುತ್ತದೆ. ಬೆಂಗಳೂರಿನಂತಹ ಮಹಾನಗರದಲ್ಲಿ ಉತ್ತಮ ಮೀನು ಸಿಗುವುದೇ ಕಷ್ಟ, ಇಂಥ ಸಂದರ್ಭದಲ್ಲಿ ನಿಗಮ ಒಳ್ಳೆಯ ಮೀನುಗಳನ್ನು ಕಡಿಮೆ ದರದಲ್ಲಿ ಮನೆ ಬಾಗಿಲಿಗೆ ತಲುಪಿಸುತ್ತಿದೆ,'' ಎಂದು ಹೇಳಿದರು. ಇದೇ ವೇಳೆ ಸಚಿವರು, ಮೀನುಗಳನ್ನು ಮನೆಮನೆಗೆ ತಲುಪಿಸುವ ಉದ್ದೇಶಕ್ಕೆ ಖರೀದಿಸಿದ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಹಾಗೂ ಮತ್ಸ್ಯದರ್ಶಿನಿಯ ಹವಾನಿಯಂತ್ರಿತ ಕೊಠಡಿಯನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮೀನುಗಾರಿಕಾ ನಿರ್ದೇಶಕ (ಪ್ರಭಾರ) ಎಂ.ಎಲ್. ದೊಡ್ಡಮನಿ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ದಿನೇಶ್ ಕುಮಾರ್ ಕಳ್ಳೇರ್, ನಿರ್ದೇಶಕ ಆನಂದ ಖಾರ್ವಿ ಉಪಸ್ಥಿತರಿದ್ದರು.



ನಿತಿನ್ ಕುಮಾರ್ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ

ನಗರದಲ್ಲಿ 27 ಕಡೆ ಆರಂಭ

ನಗರದ 27 ಜನರು ಪಿಜೆನ್ಸಿ ಪಡೆದುಕೊಂಡಿದ್ದು, ಎಲ್ಲಾ ಕಡೆಗಳಲ್ಲಿ ಶೀಘ್ರವಾಗಿ ಆನ್‌ಲೈನ್ ಮೀನು ಮಾರಾಟ ಪ್ರಾರಂಭಿಸಲಾಗುತ್ತದೆ. ಸದ್ಯ ಕಬ್ಬನ್ ಪಾರ್ಕ್‌ನ ಮತ್ಸ್ಯ ದರ್ಶಿನಿಯಲ್ಲಿ ಆರಂಭಿಸಿದ್ದು, ಸುತ್ತಮುತ್ತಲಿನ 6 ಕಿ.ಮೀ ವ್ಯಾಪ್ತಿಯಲ್ಲಿ ಸೇವೆ ನೀಡಲಾಗುತ್ತಿದೆ. ರಾಷ್ಟ್ರೀಯ ಹಬ್ಬಗಳು ಸೇರಿದಂತೆ ಎಲ್ಲಾ ದಿನ, ಬೆಳಗ್ಗೆ 7ರಿಂದ ರಾತ್ರಿ 8.30ರವರೆಗೆ ಸೇವೆ ಲಭ್ಯ ಇರುತ್ತದೆ. ಕ್ಯಾಷ್ ಆನ್ ಡೆಲಿವರಿ ಸೌಲಭ್ಯ ಮಾತ್ರ ಇರುತ್ತದೆ. ವೆಬ್‌ಸೈಟ್ ವಿಳಾಸ: http://www.buyfishbykfdc.com/

22-02-2022
Vsv Pg 13

ಬಿದಿರು ಕೃಷಿ: ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು ಗ್ರಾಮಾಂತರ: ಪರಿಶಿಷ್ಟ ಪಂಗಡದ ರೈತರು ಬಿದಿರು ಕೃಷಿಯನ್ನು ಮಾಡಲು ಪ್ರೋತ್ಸಾಹಿಸಲು ಆಹ್ವಾನಿಸಲಾಗಿದ್ದ ಅರ್ಜಿ ಸಲ್ಲಿಸಲು 2022ರ ಮಾರ್ಚ್ 28 ರವರೆಗೆ ಅವಧಿ ವಿಸ್ತರಿಸಲಾಗಿದೆ. ಪರಿಶಿಷ್ಟ ಪಂಗಡದ ರೈತರು ಜಮೀನು ಹೊಂದಿರುವ ಕುರಿತು ಆರ್‌ಟಿಸಿ/ ಅರಣ್ಯ ಹಕ್ಕು ಅಧಿನಿಯಮದಡಿ ಹಕ್ಕು ಪತ್ರ ಹೊಂದಿರಬೇಕು ಹಾಗೂ ಜಾತಿ ಪ್ರಮಾಣ ಪ್ರತವನ್ನು ಸಲ್ಲಿಸಬೇಕು. ಪ್ರತಿ ಎಕರೆಗೆ ಪ್ರತಿ ವರ್ಷ 18,000 ರು.ಗಳಂತೆ ಮೂರು ವರ್ಷಗಳ ಕಾಲಾವಧಿಗೆ ಸಹಾಯಧನ ಒದಗಿಸುವ ಕಾರ್ಯಕ್ರಮ ಇದಾಗಿದ್ದು, ಅರ್ಹ ರೈತರು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಅರ್ಜಿಗಳನ್ನು ಪಡೆದು, 2022ರ ಮಾರ್ಚ್ 28ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 080-29787448 ಸಂಪರ್ಕಿಸಿ.